ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರ ಕಛೇರಿ, ರಾಜರಾಜೇಶ್ವರಿನಗರ ವಲಯ
18ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ, ಬೆಂಗಳೂರು- 98

ಸಂಖ್ಯೆ:ಮು.ಅ/ರಾ.ರಾ.ನ.ವ/ಸಆಅ/13(A)2022-23 ದಿನಾಂಕ: 13/05/22

ಪರಿವೀಕ್ಷಣಾ ವರದಿ

ವಿಷಯ:- **Construction of Arch and Providing Interlocking Tiles infront of Sai Baba Temple and construction of RCC Roof for Ramp near Ganesha temple in ward no.17 & Widening and Improvements to Road from BEL circle to Mattikere Fly over** ಕಾಮಗಾರಿಯ ಪರಿವೀಕ್ಷಣಾ ವರದಿ ನೀಡುವ ಬಗ್ಗೆ.

• • • • •

ಹಾಜರಿದ್ದ ಅಧಿಕಾರಿಗಳು:

1. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗ
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಶವಂತಪುರ ಉಪವಿಭಾಗ
3. ಸಹಾಯಕ ಅಭಿಯಂತರರು, ವಾರ್ಡ್ ನಂ.17

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ ವಾರ್ಡ್ ನಂ.17 ಜೆ.ಪಿ ಪಾರ್ಕ್ ವಾರ್ಡ್ ವ್ಯಾಪ್ತಿಯಲ್ಲಿ 2020-21ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-3158 ಅನುದಾನದಡಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಯಾದ **"Construction of Arch and Providing Interlocking Tiles infront of Sai Baba Temple and construction of RCC Roof for Ramp near Ganesha temple in ward no.17 & Widening and Improvements to Road from BEL circle to Mattikere Fly over "** (017-20-000003) ರಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ರೂ.300.00 ಲಕ್ಷಗಳಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರದಂತೆ ಅಂದಾಜು ಪಟ್ಟಿ ಮಂಜೂರಾಗಿದ್ದು, ಅದರಂತೆ ಟೆಂಡರ್ ಕರೆದು ಸದರಿ ಕಾಮಗಾರಿಯ ಕಾರ್ಯಾದೇಶ ಸಂಖ್ಯೆ:EE/RRND/Wo.No./000062/2021-22, Dt.29.07.2021 ರಂದು ಗುತ್ತಿಗೆದಾರರಾದ **M/s SKS Infrastructures Pvt Ltd** ರವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಮುಂದುವರೆದು, ಸದರಿ ಕಾಮಗಾರಿಯ ಮೂಲ ಅಂದಾಜು ಪಟ್ಟಿಯಲ್ಲಿ ವಾರ್ಡ್ ಸಂಖ್ಯೆ17ರ ಜೆ.ಪಿ ಪಾರ್ಕ್ ಪ್ರದೇಶಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿಪಡಿಸುವ ಕಾಮಗಾರಿಗಳನ್ನು ನಿರ್ವಹಿಸಲು ಅವಕಾಶ ಮಾಡಿಕೊಂಡಿದ್ದು, ಅದರಂತೆ ಕಾಮಗಾರಿಯು ಪ್ರಗತಿಯಲ್ಲಿದ್ದಾಗ ಮಾನ್ಯ ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಶಾಸಕರು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ರವರು ಪ್ರಗತಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಸದರಿ ಪಾದಚಾರಿ ಮಾರ್ಗದ ಅಗಲವು ಕಿರಿದಾಗಿದ್ದು ವಿಸ್ತರಿಸುವಂತೆ ಹಾಗೂ ಹೂಳೆತ್ತಲು ಉದ್ದೇಶಿಸಲಾಗಿದ್ದ ಚರಂಡಿಗಳು ಸಂಪೂರ್ಣವಾಗಿ ಹಾಳಾಗಿದ್ದು, ಸದರಿ ಚರಂಡಿಗಳಲ್ಲಿ ಹೂಳೆತ್ತುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲವೆಂದು, ಸದರಿ ಚರಂಡಿಗಳನ್ನು ಮರು ನಿರ್ಮಿಸುವಂತೆ ಮಾನ್ಯ ಸಚಿವರು ಸೂಚಿಸಿರುತ್ತಾರೆ.

ಮಾನ್ಯ ಶಾಸಕರು, ಯಶವಂತಪುರ ವಿಧಾನಸಭಾ ಕ್ಷೇತ್ರ ರವರ ನಿರ್ದೇಶನದಂತೆ ವಾರ್ಡ್‌ನ ಸಹಾಯಕ ಅಭಿಯಂತರರೊಡನೆ ಮು.ಅ(ರಾ.ರಾ.ನಗರ) ಮತ್ತು ಕಾ.ಪಾ.ಅ(ರಾ.ರಾ.ನಗರ)/ಸ.ಕಾ.ಅ(ಯಶವಂತಪುರ) ರವರು ಕಾಮಗಾರಿ ಸ್ಥಳವನ್ನು ಪರಿಶೀಲಿಸಿ, ಸದರಿ ಕಾಮಗಾರಿಗೆ ಅನುಗುಣವಾಗಿ ಅಗತ್ಯವಿರುವ ಎಲ್ಲಾ ಅಂಶಗಳನ್ನು

ಮು.ತಿ.ನೋ...

Scanned with CamScanner

ಅಳವಡಿಸಿಕೊಂಡು ಹಾಗೂ ಟಿಂಡರ್ ನಿಯಮಾವಳಿ Clause 35 ರಂತೆ ದರಗಳನ್ನು ನಿಗಧಿಪಡಿಸಿ. ಈಗಾಗಲೇ
ಅನಮೋದನೆಯಾಗಿರುವ ಅಂದಾಜುಪಟ್ಟಿಯನ್ನು ಮಾರ್ಪಾಡು ಮಾಡಿಕೊಂಡು ರವರು ಕಾಮಗಾರಿ ಸ್ಥಳವನ್ನು ಪರಿಶೀಲಿಸಿ,
ಹೂಳೆತ್ತಲು ಉದ್ದೇಶಿಸಲಾಗಿದ್ದ ಚರಂಡಿಗಳನ್ನು ಒಡೆದು ಹಾಕಿ, ಹೊಸದಾಗಿ ಕಾಂಕ್ರಿಟ್ ಚರಂಡಿ ನಿರ್ಮಿಸಲು
ಹಾಗೂಪಾದಚಾರಿ ಮಾರ್ಗದ ಅಗಲವನ್ನು ವಿಸ್ತರಿಸಿಕೊಂಡಿದ್ದರಿಂದ ಮೂಲ ಅಂದಾಜು ಪಟ್ಟಿಯ ಕೆಲವೊಂದು
ಅಂಶಗಳಲ್ಲಿ ಬದಲಾವಣೆಗಳಾಗಿದ್ದ, ಪಾದಚಾರಿ ಮಾರ್ಗದಲ್ಲಿ S.S Railings ಅಳವಡಿಸಿಕೊಳ್ಳಲು ಅನುವು ಮಾಡಿದ್ದ
ಅಂಶಗಳಲ್ಲಿ ಉಳತಾಯ ಮಾಡಿ ಕಾಂಕ್ರೀಟ್ ಚರಂಡಿ ನಿರ್ಮಿಸಲು ಹಾಗೂ ಪಾದಚಾರಿ ಮಾರ್ಗದ ಅಗಲವನ್ನು
ವಿಸ್ತರಿಸುವ ಅಂಶಗಳ ಪರಿಮಾಣಗಳಲ್ಲಿ ಉಂಟಾದ ವ್ಯತ್ಯಾಸದಿಂದ ಹೆಚ್ಚುವರಿಯಾದ ಮೊತ್ತವನ್ನು ಸರಿದೂಗಿಸಿಕೊಂಡು
ಕೆಲವು ಮಾರ್ಪಾಡುಗಳೊಂದಿಗೆ ಮಾರ್ಪಾಡು ಅಂದಾಜು ಪಟ್ಟಿಯನ್ನು ಅನುಮೋದಿತ ಟಿಂಡರ್ ಮೊತ್ತದೊಳಗೆ
ತಯಾರಿಸಿ ಅನುಮೋದನೆ ಪಡೆದುಕೊಳ್ಳಲು ಕಾರ್ಯಪಾಲಕ ಅಭಿಯಂತರರು (ರಾ.ರಾ.ನಗರ) ರವರಿಗೆ ಪರಿವೀಕ್ಷಣೆ
ಸಮಯದಲ್ಲಿ ಸೂಚಿಸಲಾಯಿತು.

ಮುಖ್ಯ ಅಭಿಯಂತರರು
ರಾಜರಾಜೇಶ್ವರಿನಗರ ವಲಯ

ರವರಿಗೆ,
ಕಾರ್ಯಪಾಲಕ ಅಭಿಯಂತರರು
ರಾ.ರಾ.ನಗರ ವಿಭಾಗ

2. 2nd and Part bill
ivision : RR Nagar Divisi
stimate Cost (Rs.) :300
3ill Received No .....
Scheduled Docket N
Name of Wo
Interlocking
Near Gan
Circle
Job

Scanned with CamScanner